Notice of adjournment motion *re*: Appointment of Local Candidates in Government

ಶ್ರೀ ಪಾಟಾಳ್ ನಾಗರಾಜ್.—ಸ್ವಾಮಿ, 8 ಸಾವಿರ ಜನ ಲೋಕಲ್ ಕ್ಯಾಂಡಿಡೇಟುಗಳನ್ನು ಕೆಲಸದಿಂದ ತೆಗೆಯುವ ಬಗ್ಗೆ ನಾನು ಒಂದು ನೋಟೀಸನ್ನು ತಮಗೆ ಕಳುಹಿಸಿದ್ದೆ. ಅದು ಏನಾಯಿತು ಎಂಬುದು ಗೊತ್ತಾಗಲಿಲ್ಲ. ಈ ಸ್ಥಳೀಯ ಅಭ್ಯರ್ಥಿಗಳನ್ನು ಖಾಯಂ ಗೊಳಿಸತಕ್ಕ ಬಗ್ಗೆ ಎನ್.ಜಿ.ಓಗಳು ಬೇಡಿಕೆ ದಿನಾಚರಣೆಯನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರದವರು ಏನು ಮಾಡುತ್ತಾರೆ ಎನ್ನುವ ವಿಷಯದಲ್ಲಿ ಒಂದು ಹೇಳಿಕೆಯನ್ನು ಕೊಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಆ ವಿವರ ಬೇಕಾದರೆ ನಾನು ಕೊಡುತ್ತೇನೆ. The appropriate subject for an Adjournment Motion is a definite matter of urgent public importance. The principle and policy underlying the appointments is in accordance with the Cadre and Recruitment Rules. This is an old matter. It is not a matter of urgent public importance, nor is it a matter of recent occurence. The change of policy concerning the local candidates cannot be a fit subject for adjournment motion. The hon'ble Member wants to make a recommendation to the Government to change their policy. That could be done in other ways than by notice of adjournment motion. Starred question No. 472 tabled by hon. Member Sri Venkatagiriyappa came up for oral answer on 3rd March 1969. The question was discussed for more than fifteen minutes. Also an opportunity to discuss this question in the debate on General Administration was given. I am therefore unable to give my consent and under my instructions my ruling has been communicated to the hon. Member. Therefore, the consent is refused. There is no scope for raising this matter.

3-00 P.M.

ಶ್ರೀ ಪಾಟಾಳ್ ನಾಗರಾಜ್.—ಸ್ವಾಮಿ.....

ಅಧ್ಯಕ್ಷರು.—ನಾನು ರೂಲಿಂಗ್ ಕೊಟ್ಟಮೇಲೆ ಮತ್ತೆ ಅದರ ಮೇಲೆ ಮಾತನಾಡಬಾರದು.

ಶ್ರೀ ಎಸ್. ಪಿ. ಅಗ್ನಿಹೋತ್ರಿ.—ಅವರನ್ನು ತಮ್ಮ ಚೇಂಬರ್‌ಗೆ ಕರೆಸಿಕೊಂಡು ಸ್ವಲ್ಪ ಟ್ರೈನಿಂಗ್ ಕೊಡಿ.

ಶ್ರೀ ಪಾಟಾಳ್ ನಾಗರಾಜ್.—ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಅವರು ಆ ಬಗ್ಗೆ ಒಂದು ಹೇಳಿಕೆ ಕೊಡಬೇಕು. ಈ ದಿನ ಈ ನೌಕರರು ಬೇಡಿಕೆ ದಿನವನ್ನಾಚರಿಸುತ್ತಿದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

Notice of Adjournment Motion *re*: Lease of Land to the "Hindu" for their Office and Press

ಶ್ರೀ ಎಂ. ನಾಗಪ್ಪ.—ನಾನು ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕಳಿಸಿದ್ದೆ. ಲೇಬರ್ ಕಮೀಷನರ್ ಆಫೀಸನ್ನು ಬೇರೆ ಕಡೆಗೆ ಕಳಿಸಿ, ಆ ಜಾಗವನ್ನು ಹಿಂದೂಪತ್ರಿಕೆಗೆ ಕೊಡಬೇಕೆಂದು ಸರ್ಕಾರದವರು ತೀರ್ಮಾನ ಮಾಡಿರುವ ಬಗ್ಗೆ ಸಂಬಂಧಪಟ್ಟಿದ್ದು. ಅದು ಏನಾಯಿತು ?